FEBRUARY 21, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ಕನ್ನಡ ಪುಸ್ತಕ ಪ್ರಾಧಿಕಾರದಿಂದ, ರಾಜ್ಯದ 1 ಲಕ್ಷ ಮನೆಗಳಲ್ಲಿ 'ಮನೆಗೊಂದು ಗ್ರಂಥಾಲಯ' ಯೋಜನೆ.

ಕಲಬುರಗಿಯಲ್ಲಿ ಇಂದಿನಿಂದ, ರಾಷ್ಟ್ರೀಯ ನಾಟಕೋತ್ಸವ ಆರಂಭ.

ಇಂದು, ಅಂತಾರಾಷ್ಟ್ರೀಯ ಮಾತೃಭಾಷಾ ದಿನ.

ನಾಳೆ, 131 ನೇ ಆವೃತ್ತಿಯ 'ಮನ್ ಕಿ ಬಾತ್' ಪ್ರಸಾರ.

<><><>

ಈಗ ವಾರ್ತೆಗಳ ವಿವರ

<><><>

ನವೀಕರಿಸಬಹುದಾದ ನೈಸರ್ಗಿಕ ಅನಿಲ ಹಾಗೂ ಹಸಿರು ಜಲಜನಕ ಭವಿಷ್ಯದ ಇಂಧನ ಶಕ್ತಿಯಾಗಿದೆ. ವಿಶ್ವದಲ್ಲಿ ಮೆಥನಾಲ್ ಬದಲಿಗೆ, 60 ಹಡಗುಗಳು ಈಗಾಗಲೇ ಹಸಿರು ಇಂಧನದ ಮೂಲಕ ಕಾರ್ಯಾಚರಿಸುತ್ತಿವೆ ಎಂದು ಕೇಂದ್ರ ಇಂಧನ ಕಾರ್ಯಕ್ಷಮತೆ ಬ್ಯೂರೋ ಮಹಾನಿರ್ದೇಶಕ ಅಭಯ ಭಾಕ್ರೆ ಹೇಳಿದರು. ಮಂಗಳೂರು, ಟಿಎಂಎ ಪೈ ಇಂಟರ್ ನ್ಯಾಷನಲ್ ಸಮ್ಮೇಳನ ಸಭಾಂಗಣದಲ್ಲಿ, ಇಟಲಿಯ ಮಿರ್ ಗ್ರೂಪ್ ಆಯೋಜಿಸಿದ್ದ 'ನೆಟ್ ಝೀರೊ ವಿಶನ್' ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಗ್ರೀನ್ ಹೈಡ್ರೋಜನ್ ಸೇರಿದಂತೆ ಪರಿಸರಕ್ಕೆ ಪೂರಕವಾದ ಅಂಶಗಳತ್ತ ಹೆಚ್ಚಿನ ಒಲವು ಹರಿಸಬೇಕಿದೆ. ಹಾಗಾದಾಗ ಶತಮಾನಗಳ ಹಿಂದಿನಂತೆ ಭೂಮಿಯ ಮೇಲೆ, ಸ್ವಚ್ಛ ಪರಿಸರದ ಬದುಕು ಸಾಧ್ಯವಾಗಲಿದೆ ಎಂದರು.

<><><>

ಪುಸ್ತಕಗಳು ಮನೆ ಮನೆಯ, ಜ್ಞಾನದ ಸಂಪತ್ತಾಗಿ ಅಸ್ತಿತ್ವ ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ, ಕನ್ನಡ ಪುಸ್ತಕ ಪ್ರಾಧಿಕಾರ, ರಾಜ್ಯದ ಕನಿಷ್ಠ 1 ಲಕ್ಷ ಮನೆಗಳಲ್ಲಿ 'ಮನೆಗೊಂದು ಗ್ರಂಥಾಲಯ' ಯೋಜನೆಯನ್ನು ಜಾರಿಗೆ ತಂದಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾಕ್ಟರ ಮಾನಸ್ ತಿಳಿಸಿದ್ದಾರೆ. ಚಾಮರಾಜನಗರದ ರೋಟರಿ ಭವನದ ಸಭಾಂಗಣದಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ

'ಮನೆಗೊಂದು ಗ್ರಂಥಾಲಯ' ಯೋಜನೆಯ ಕರಪತ್ರ ಬಿಡುಗಡೆಗೊಳಿಸಿ ಅವರು ಮಾತನಾಡಿದರು. ಮನೆಗೊಂದು ಗ್ರಂಥಾಲಯವು, ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿದೆ. ಒಂದು ಲಕ್ಷ ಮನೆಗಳಲ್ಲಿ ಗ್ರಂಥಾಲಯ ಅಸ್ತಿತ್ವಕ್ಕೆ ತರುವ ಗುರಿಯೊಂದಿಗೆ ಕಾರ್ಯೋನ್ಮುಖರಾಗಿದ್ದೇವೆ. ಇದಕ್ಕೆ ಬೇಕಾಗುವ ಪುಸ್ತಕಗಳ ಖರೀದಿಯಿಂದ, ಪುಸ್ತಕ ಪ್ರಕಾಶಕರು, ವ್ಯಾಪಾರಿಗಳಿಗೆ, ಕಾಗದ ಮಾರಾಟಗಾರರು, ವಿತರಕರು ಸೇರಿದಂತೆ, ಇಡೀ ಪುಸ್ತಕ ಉದ್ಯಮ ಕ್ರಿಯಾಶೀಲವಾಗಿರುತ್ತದೆ ಎಂದರು.

<><><>

ಹೆಚ್ಚುತ್ತಿರುವ ಜನಸಂಖ್ಯೆ, ಕಡಿಮೆಯಾಗುತ್ತಿರುವ ಕೃಷಿ ಭೂಮಿಯಲ್ಲಿ ಅಧಿಕ ಕೃಷಿ ಉತ್ಪಾದಕತೆಯ ಜೊತೆ, ಮಣ್ಣು ಹಾಗೂ ನೀರಿನ ಸಂರಕ್ಷಣೆ ಎಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಜಲ ಮತ್ತು ನೆಲ ನಿರ್ವಹಣೆ –ವಾಲ್ಮಿ ಸಂಸ್ಥೆ ನಿರ್ದೇಶಕ ಡಾಕ್ಟರ ಗಿರೀಶ್ ಎನ್. ಮರಡಿ ಹೇಳಿದರು. ಹುಬ್ಬಳ್ಳಿ ತಾಲೂಕು, ಹೊಸೂರು ಹಾಗೂ ಗೋಪನಕೊಪ್ಪ ಸರ್ಕಾರಿ ಶಾಲೆ ಮಕ್ಕಳಿಗೆ ಆಯೋಜಿತ 'ಸಮಗ್ರ ಜಲ ಮತ್ತು ನೆಲ ನಿರ್ವಹಣೆ' ಕುರಿತು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ಕಡಿಮೆ ನೀರು ಬಳಕೆ ಮಾಡಿ ಅಧಿಕ ಇಳುವರಿ ಕೊಡುವ ಬೆಳೆಗಳು ಹಾಗೂ ತಾಂತ್ರಿಕತೆಗಳ ಬಗ್ಗೆ ಮಕ್ಕಳಿಗೆ ತಿಳಿವಳಿಕೆ ಮೂಡಿಸಿದರು.

<><><>

16 ನೇ ವಿಧಾನಸಭೆಯ, 9 ನೇ ಅಧಿವೇಶನ ಮಾರ್ಚ್ 6 ರಿಂದ 27 ರ ವರೆಗೆ ವಿಧಾನ ಸೌಧದ ಸಭಾಂಗಣದಲ್ಲಿ ನಡೆಯಲಿದೆ. ಉಭಯ ಸದನಗಳ ಕಾರ್ಯಕಲಾಪದ ನೇರ ಪ್ರಸಾರವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ವಹಿಸಲಾಗಿದೆ ಎಂದು ಕರ್ನಾಟಕ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿ ಎಂ.ಕೆ ವಿಶಾಲಾಕ್ಷಿ ಅವರು ತಿಳಿಸಿದ್ದಾರೆ.

<><><>

ಧಾರವಾಡದ, ಕರ್ನಾಟಕ ಮಹಾವಿದ್ಯಾಲಯ ಆವರಣದಲ್ಲಿ, ನಾಳೆ 22 ರಂದು, ಶ್ವಾನ ಪ್ರದರ್ಶನ –2026 ಆಯೋಜಿಸಲಾಗಿದೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯತ್ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಜರುಗುವ ಶ್ವಾನ ಪ್ರದರ್ಶನದಲ್ಲಿ, ಬೀದಿ ಶ್ವಾನ ಮರಿಗಳ ದತ್ತು ಕಾರ್ಯಕ್ರಮ ಹಾಗೂ ಅವುಗಳಿಗೆ ಉಚಿತ ರೋಗ ಲಸಿಕೆ ನೀಡುವ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಉಪ ನಿರ್ದೇಶಕರಾದ ಡಾಕ್ಟರ ಎಸ್.ವಿ ಸಂತಿ

<><><>

ಡಾಕ್ಟರ ಎಸ್.ವಿ ಸಂತಿ ಧ್ವನಿ 42 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕಲಬುರಗಿ ನಗರದ ಎಸ್.ಎಂ ಪಂಡಿತ ರಂಗ ಮಂದಿರದಲ್ಲಿ, ಇಂದಿನಿಂದ, 28 ರ ವರೆಗೆ ರಾಷ್ಟ್ರೀಯ ನಾಟಕೋತ್ಸವ ಆಯೋಜಿತವಾಗಿದೆ. ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಹಾಗೂ ಬೆಂಗಳೂರು ರಂಗ ಶಂಕರ ಸಹಯೋಗದಲ್ಲಿ ರಾಷ್ಟ್ರೀಯ ನಾಟಕೋತ್ಸವ ಜರುಗಲಿದ್ದು, ಇಂದು ಸಂಜೆ 5.30 ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಉದ್ಘಾಟಿಸಲಿದ್ದಾರೆ. ಪ್ರತಿ ದಿನ ಸಂಜೆ 7 ಗಂಟೆಗೆ ಎಸ್.ಎಂ ಪಂಡಿತ್ ರಂಗ ಮಂದಿರದಲ್ಲಿ ವಿವಿಧ ಭಾಷೆಗಳ ಪ್ರಸಿದ್ಧ ನಾಟಕಗಳು ಪ್ರದರ್ಶನಗೊಳ್ಳಲಿವೆ, ಇಂದು ಬಿ.ಜಯಶ್ರೀ ನಿರ್ದೇಶನದ 'ಕರಿಮಾಯಿ' ಕನ್ನಡ ಭಾ ೆಯ ನಾಟಕ ಬೆಂಗಳೂರಿನ ಸ್ಪಂದನ ತಂಡದಿಂದ ಪ್ರದರ್ಶನಗೊಳ್ಳಲಿದೆ. ಕಲಬುರಗಿ ರಂಗಾಯಣದಲ್ಲಿ ಪ್ರತಿ ದಿನ ಬೆಳಗ್ಗೆ 11 ಗಂಟೆಯಿಂದ ಮಕ್ಕಳ ನಾಟಕಗಳು ಪ್ರಸ್ತುತಗೊಳ್ಳಲಿವೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ರಂಗಭೂಮಿಗೆ ಸಂಬಂಧಪಟ್ಟಂತೆ ಸಂವಾದ ಕಾರ್ಯಕ್ರಮಗಳು ಜರುಗಲಿವೆ.

<><><>

ಇಂದು ಅಂತಾರಾಷ್ಟ್ರೀಯ ಮಾತೃಭಾ ಾ ದಿನ. 'ಬಹುಭಾ ಾ ಶಿಕ್ಷಣದ ಕುರಿತು, ಯುವಜನರ ಧ್ವನಿಗಳು' ಎಂಬುದು ಈ ಬಾರಿಯ ಘೋಷವಾಕ್ಯವಾಗಿದೆ. ಮಾತೃಭಾ ೆಯ ಪ್ರಾಮುಖ್ಯತೆ, ಅದರ ಮಹತ್ವ ಸಾರುವ ದಿನವಾಗಿದೆ. ಅಂತಾರಾಷ್ಟ್ರೀಯ ಮಾತೃಭಾ ಾ ದಿನದ ವಿಶೇ ತೆ ಹಾಗೂ ಕನ್ನಡ ಭಾ ೆಯ ವಿಶ್ವವ್ಯಾಪಕತೆಯ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾಕ್ಟರ ಪುರು ೋತ್ತಮ ಬಿಳಿಮಲೆ.

<><><>

ಡಾಕ್ಟರ ಪುರುಷೋತ್ತಮ ಬಿಳಿಮಲೆ 75 ಸೆಕೆಂದುಗಳು

<><><>

ಆಕಾಶವಾಣಿಯ ಜನಪ್ರಿಯ, 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ, ನಾಳೆ 22 ರಂದು, ಬೆಳಗ್ಗೆ 11 ಗಂಟೆಗೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದು ಮನದ ಮಾತು, ಬಾನುಲಿ ಭಾ ಣದ 131 ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ, ಆಕಾಶವಾಣಿ ಯೂಟ್ಯೂಬ್ ವಾಹಿನಿ ಹಾಗೂ ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್ ಗಳಲ್ಲಿ ಪ್ರಸಾರವಾಗಲಿದೆ.

<><><>

ಉತ್ತರ ಕನ್ನಡ ಜಿಲ್ಲೆಯ ದೀರ್ಘಕಾಲದ ಬೇಡಿಕೆಯನ್ನು ಪರಿಗಣಿಸಿ, ಮುಂಬರುವ ಆಯವ್ಯಯದಲ್ಲಿ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ಹೆಚ್ಚುವರಿ ಮೂಲಸೌಕರ್ಯ ಹಾಗೂ ಸುಧಾರಿತ ಸೌಲಭ್ಯಗಳಿಂದ ಬಲಪಡಿಸುವಂತೆ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಶಾಸಕ ಆರ್.ವಿ ದೇಶಪಾಂಡೆ ಸರ್ಕಾರವನ್ನು ಆಗ್ರಹಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ್ ಅವರಿಗೆ ಪತ್ರ ಬರೆದಿರುವ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಅವರು, ಕಾರವಾರ ಆಸ್ಪತ್ರೆಯನ್ನು ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸಲು ಅಗತ್ಯ ಅನುದಾನ ಮೀಸಲಿಡುವಂತೆ ಅವರು ಕೋರಿದರು.

<><><>

ಭಾರತದಲ್ಲಿ ದೃಷ್ಟಿ ವಿಶೇಷ ಚೇತನರ ಕ್ರಿಕೆಟ್ ಅಭಿವೃದ್ಧಿಗೆ, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ– ಬಿ.ಸಿ.ಸಿ.ಐ ಸಹಕಾರ ನೀಡಲಿದ್ದು, ಭಾರತೀಯ ಅಂಧರ ಕ್ರಿಕೆಟ್ ಸಂಘ–ಸಿ.ಎ.ಬಿ.ಐ ಸ್ಮರಿಸಿದ್ದು, ಕೃತಜ್ಞತೆ ಸಲ್ಲಿಸಿದೆ. ಅಂಧ ಪುರುಷ ಹಾಗೂ ಮಹಿಳಾ ತಂಡಗಳ, 2 ವಿದೇಶಿ ಟೂರ್ನಿಗಳಿಗೆ ಪ್ರಯಾಣ ಹಾಗೂ ವಸತಿ ವೆಚ್ಚವನ್ನು ಬಿಸಿಸಿಐ ನೀಡಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಕನ್ನಡ ಪುಸ್ತಕ ಪ್ರಾಧಿಕಾರದಿಂದ, ರಾಜ್ಯದ 1 ಲಕ್ಷ ಮನೆಗಳಲ್ಲಿ 'ಮನೆಗೊಂದು ಗ್ರಂಥಾಲಯ' ಯೋಜನೆ.

ಕಲಬುರಗಿಯಲ್ಲಿ ಇಂದಿನಿಂದ, ರಾಷ್ಟ್ರೀಯ ನಾಟಕೋತ್ಸವ ಆರಂಭ.

ಇಂದು, ಅಂತಾರಾಷ್ಟ್ರೀಯ ಮಾತೃಭಾಷಾ ದಿನ.

ನಾಳೆ, 131 ನೇ ಆವೃತ್ತಿಯ 'ಮನ್ ಕಿ ಬಾತ್' ಪ್ರಸಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>